# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
## ಸಿ.ಸಿ. ನಂ: 528/2015

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | **ಹೆಚ್ ನೂರಅಹಮ್ಮದ್** | **ಪಿ.ಡಬ್ಲ್ಯೂ-03** |
| **ತಂದೆಯ ಹೆಸರು** | : | **ಹೆಚ್ ಮೌಲಾಸಾಬ** | **ಸಿ.ಡಬ್ಲ್ಯೂ-05** |
| **ವಯಸ್ಸು** | : | **50 ವರ್ಷ** | |
| **ಉದ್ಯೋಗ** | : | **ಮುಖ್ಯ ಪೇದೆ ತೋರಣಗಲ್ಲ ಪೊಲೀಸ್ ಠಾಣೆ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 17.11.2025.** |
| **ವಾಸಸ್ಥಳ** | : | **ತೋರಣಗಲ್ಲ** | |

**<u>ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ನಾನು ತೋರಣಗಲ್ಲು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ 2021 ಇಲ್ಲಿಯವರೆಗೆ ಕೆಲಸ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ತೋರಣಗಲ್ಲ ಪೊಲೀಸ್ ಠಾಣೆಯ ಗುನ್ನಾ ನಂಃ 106/2014 ರಲ್ಲಿ ಆರೋಪಿ ಮತ್ತು ಮಾಲು ಪತ್ತೆಗಾಗಿ ನಮ್ಮ ಠಾಣೆಯ ಪಿ.ಎಸ್.ಐ ರವರು ನನಗೆ, ಚಾಸಾ 4, ಚಾಸಾ 6 ರಿಂದ 8 ರವರಿಗೆ ನೇಮಿಸಿರುತ್ತಾರೆ.

ಅದರಂತೆ ನಾವು ದಿಃ03.01.2015 ರಂದು ಆರೋಪಿ ಮತ್ತು ಮಾಲು ಪತ್ತೆಗಾಗಿ ತೋರಣಗಲ್ಲ ಗ್ರಾಮ ಮತ್ತು ತೋರಣಗಲ್ಲ ಆರ್.ಎಸ್ ನಲ್ಲಿ ಭಾತ್ಮಿದಾರರಿಂದ ಮಾಹಿತಿ ಪಡೆದು ಬೆಳ್ಳಿಗ್ಗೆ ಸುಮಾರು 9.30 ಗಂಟೆಗೆ ತೋರಣಗಲ್ಲ ಆರ್.ಎಸ್ ನ ಓವರ್ ಬ್ರಿಡ್ಜ ಹತ್ತಿರ ಒಬ್ಬ ಅನುಮಾನಸ್ಥಿತಿಯ ವ್ಯಕ್ತಿಯು ಬಂಗಾರ ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿರುತ್ತದೆ. ನಾವು ಎಲ್ಲರೂ ಸೇರಿ ಹೋಗಿ ಅವನನ್ನು ಹಿಡಿದು ವಿಚಾರಿಸಿದಾಗ ಅವನು ಗಾಬರಿಯಾಗಿ ಓಡಲು ಪ್ರಯತ್ನ ಮಾಡಿದ್ದು, ಅವನು ಸಾರ್ವಜನಿಕರಿಗೆ ಬಂಗಾರ ಮಾರಾಟ ಮಾಡಲು ನಿಂತಿದ್ದನು. ನಾವು ಎಲ್ಲರೂ ಸೇರಿ ಸದರಿ ವ್ಯಕ್ತಿಯನ್ನು ಹಿಡಿದು ಠಾಣೆಗೆ ಕರೆದುಕೊಂಡು ಹೋಗಿ

ಚಾಸಾ 13 ರವರ ಮುಂದೆ ಹಾಜರುಪಡಿಸಿರುತ್ತೇವೆ. ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸ ವಿಚಾರಿಸಿದಾಗ ಅವನ ಹೆಸರು ಈ ಪ್ರಕರಣದ 1 ನೇ ಆರೋಪಿಯಾಗಿರುತ್ತಾನೆ. ಸದರಿ ಆರೋಪಿತರನ್ನು ಬೆಳ್ಳಿಗ್ಗೆ 10.00 ಗಂಟೆಗೆ ಹಾಜರುಪಡಿಸಿರುತ್ತೇವೆ.

ಚಾಸಾ 13 ರವರು ಅವರ ಬಳಿ ಇದ್ದ ಬಂಗಾರವನ್ನು ವಶಪಡಿಸಿಕೊಂಡಿರುತ್ತಾರೆ. 1 ನೇ ಆರೋಪಿಯ ವಶದಿಂದ ಒಂದು ಕಠಾಣಿ ಸರ, ಒಂದು ಜೊತೆ ಕಿವಿ ಬೆಂಡೋಲೆ, ಕಿವಿ ಚೈನ್ ಮತ್ತು ಉಂಗುರ, ಎಲ್ಲ ಸೇರಿ ಒಟ್ಟು ಸುಮಾರು ಎರಡುವರೆ ತೋಲಾ ಬಂಗಾರ ಜಪ್ತು ಪಡೆಸಿಕೊಂಡಿರುತ್ತಾರೆ.

ಸದರಿ ವಸ್ತುಗಳು ಬೆಳ್ಳಿಗ್ಗೆ 11.00 ರಿಂದ 12.00 ರವರೆಗೆ ಪಂಚರ ಸಮಕ್ಷಮ ಪಂಚನಾಮೆ ಮುಖಾಂತರ ಜಪ್ತು ಪಡೆಸಿಕೊಂಡಿರುತ್ತೇವೆ. 1 ನೇ ಆರೋಪಿ ಹೇಳಿದಂತೆ ಅವನು ತನ್ನ ಅಣ್ಣನ ಜೊತೆ ಸೇರಿ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾನೆ. ನಾನು ತನಿಖಾಧಿಕಾರಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. 1 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಜಪ್ತು ಪಂಚನಾಮೆಯಲ್ಲಿ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ದೋಷಾರೋಪಣ ಪಟ್ಟಿಯ ಜೊತೆ ಅಸಲು ಜಪ್ತು ಪಂಚನಾಮೆಯನ್ನು ಸಲ್ಲಿಸಿರುವುದಿಲ್ಲ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎಸ್.ಯು.ಎನ್ ವಕೀಲರಿಂದಃ</u>**

ಘಟನಾ ಸ್ಥಳದಲ್ಲಿ ನಾನು 2 ನೇ ಆರೋಪಿಯನ್ನು ನೋಡಿರುವುದಿಲ್ಲ. 1 ನೇ ಆರೋಪಿಯನ್ನು ನಾನು ಖುದ್ದಾಗಿ ವಿಚಾರಣೆ ಮಾಡಿರುವುದಿಲ್ಲ, ಆದರೆ ಚಾಸಾ 13 ರವರು ನನ್ನ ಮುಂದೆ ವಿಚಾರಣೆ ಮಾಡಿರುತ್ತಾರೆ. 1 ನೇ ಆರೋಪಿಯನ್ನು ಚಾಸಾ 13

ರವರು ವಿಚಾರಣೆ ಮಾಡಿದನ್ನು ಹೊರತುಪಡಿಸಿ ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿಯ ಬಗ್ಗೆ ವಿಚಾರಣೆ ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. 2 ನೇ ಆರೋಪಿ, 1 ನೇ ಆರೋಪಿಯ ಅಣ್ಣನಾಗಿರುತ್ತಾನೆ, ಈ ಬಗ್ಗೆ ನಾನು ದಾಖಲೆಯನ್ನು ನೋಡಿರುತ್ತೇನೆ. 2 ನೇ ಆರೋಪಿಯನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. 2 ನೇ ಆರೋಪಿಯು 1 ನೇ ಆರೋಪಿಯ ಅಣ್ಣನಾಗಿರುತ್ತಾನೆ ಎಂದು ನಾನು ಪರಿಶೀಲನೆ ಮಾಡಿರುವುದಿಲ್ಲ.

1 ನೇ ಆರೋಪಿ ಹಾಗೂ 2 ನೇ ಆರೋಪಿ ಅಣ್ಣ ತಮ್ಮಂದಿರು ಆಗಿರುವುದಿಲ್ಲ ಎಂದರೆ ಸರಿಯಲ್ಲ. ವಶಕ್ಕೆ ಪಡೆದುಕೊಂಡ ಮುದ್ದೆ ಮಾಲುಗಳು 2 ನೇ ಆರೋಪಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳ ರೀತಿಯ ವಸ್ತುಗಳು ಎಲ್ಲ ಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳ ಮೇಲೆ ಚಾಸಾ 13 ರವರು ಸಿಲ್ ಹಾಕಿರುತ್ತಾರೆ. ಅದಕ್ಕೆ ಚಾಸಾ 9 ಮತ್ತು 10 ರವರು ಸಹಿ ಮಾಡಿರುತ್ತಾರೆ. ಅವರ ಸಮಕ್ಷಮ ನಾವು ಯಾವುದೇ ವಸ್ತು ಜಪ್ತು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲೇವಾರಿಯಾಗಿದೆ ಇರುವ ಮುದ್ದೆ ಮಾಲುಗಳನ್ನು ಉಪಯೋಗಿಸಿ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**